doc-16
T.P-2

Regn No M 1229 | 43rd Year | Sri 'Satyavadi' Mysore | 20-[illegible]-1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸಂಪಾದಕರು– ಅರವಮನೆ ಸಿಂಹೇದಾರ್ ಎಂ. ಎ ಸುಬ್ಬರಕಮುರು [ಬಿಡಿ ಪ್ರತಿ3ಪೈ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಅಮೇರಿಕಾ–ಪಾಕಿಸಾನ ಒಪಂದದಿಂದ ಭಾರತಕೆ ಅಪಾಯ

ಅಂಧ ವಿದ್ಯಾರ್ಥಿಯ ಶ್ರದ್ಧೆ

ಇಂದೂರು 19 — 26 ವರ್ಷದ ಮಧುಕರ ಶಿಧೋರ್ಕರ ಎಂಬಾತ ಮೆಟ್ರಿಕ್ ಪರೀಕ್ಷೆಗೆ ಕುಳಿತಿರುವನು ಆತ ಹೇಳಿದ ಉತ್ತರ ಬರೆಯಲು ಹುಡುಗಿಯೋರ್ವಳ ನೇಮಕವಾಗಿದೆ

ಪಾಲಿಟೆಕ್ನಿಕ್‌ಗಳು

ಮೈಸೂರು ಪ್ರಾಂತದಲ್ಲಿ 2 ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸುವದಾಗಿ ಮದ್ರಾಸಿನಿಂದ ವರದಿ ಬಂದಿದೆ.

ಪ್ರತಿಭಟನೆ

ಪಂಜಾಬಿನಲ್ಲಿ ರೈತರ ಮೇಲೆ ದಬ್ಬಾಳಿಕೆ ನಡೆಯುತ್ತಿರುವದನ್ನು ದಾವಣಗೆರೆಯಲ್ಲಿ ಸೇರಿದ್ದ ಪ್ರಾಂತ ಕಮ್ಯುನಿಸ್ಟ್ ಪಕ್ಷದ ಸಮ್ಮೇಳನ ಪ್ರತಿಭಟಿಸಿದೆ

ಎಂ ಸಿ ಸಿ

ಬೆಂಗಳೂರು ಕಾಂಗ್ರೆಸು ಭವನದಲ್ಲಿ ಈ ತಿಂಗಳ 28 ನೇ ತಾ|| ಮಧ್ಯಾಹ್ನ 3 ಗಂಟೆಗೆ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಸಭೆ ಸೇರುವದು

ರಾಜಾಜಿ ಎಚ್ಚರಿಕೆ

ಮದ್ರಾಸು 19 — ಈಗಿನ ಯೋಜನೆ ಭಾರವನ್ನು ದಿವಾಳಿ ಎಬ್ಬಿಸುವದೆಂದು ರಾಜಾಜಿ ತಿಳಿಸಿರುವರು

ಭೂಕಂಪ ಮೊತ್ತಕ್ಕೆ ಮಾರಾಟ

ಲಂಡನ್ 19 — ಕಾಶ್ಮೀರದ ಮಹಾರಾಜರೋರ್ವರಿಗೆ 50 ವರ್ಷಗಳ ಕೆಳಗೆ ಕಾಶ್ಮೀರ ಜಂಖಾನ ಹರಾಜಿ 1850 ಗಿನಿಗಳನ್ನು ಸಂಪಾದಿಸಿತು

ಲಂಡನ್ 19 — ಬ್ರಿಟನ್ನಿನಲ್ಲಿ ಈಗ ಕೋರಗಳ ಸಂ 3 ಏರುತ್ತಿದೆ

ನವ ದೆಹಲಿ 19 — ಭೇಟಿಯಿತ್ತಿರುವ ಕೃಷ್ಯ ಸರ್ಕಾರದ ನಿಯೋಗ ಪತ್ರಿಕಾ ಹೇಳಿಕೆಯನ್ನಿತ್ತು, ಅಮೇರಿಕಾ ಭರವಸೆಯನ್ನು ಕೊಟ್ಟಾಗ್ಯೂ, ಅಮೇರಿಕಾ–ಪಾಕಿಸ್ತಾನ ದ್ವಿಮುಖ ಸೇನಾ ಒಪ್ಪಂದದ ಬಗ್ಗೆ ಭಾರತ ಜನರಿಗೆ ಕಾಳಜಿ ಉಂಟಾಗಿದೆ ಎಂದು ತಿಳಿಸಿದೆ ಏಕೆಂದರೆ ಈ ಒಪ್ಪಂದ ರಹಸ್ಯದ ನಿರುದ್ಧ ಮಾತ್ರವೆ ಅಲ್ಲ, ಮೊದಲು ಭಾರತ ಮತ್ತು ಅಫ್ಘಾನಿಸ್ತಾನದ ಮೇಲೆ ಅದಂಗುರಿ ಇದೆ ಎಂದು ಅದು ತಿಳಿಸಿದೆ

ಪಂಜಾಬ್ ಪರಿಸ್ಥಿತಿ ವೀಕ್ಷಣೆಗೆ ನಿಯೋಗ

ನವ ದೆಹಲಿ 19 — ಅಕಾಲಿ ಮತ್ತು ಕಮ್ಯುನಿಸ್ಟರ ಚಳುವಳಿಯಿಂದ ಉಂಟಾಗಿರುವ ರಾಜಕೀಯ ಪರಿಸ್ಥಿತಿಯನ್ನು ಕುರಿತು ವರದಿ ಮಾಡಲು ಕಾಂಗ್ರೆಸು ಹೈಕಮಾಂಡು ಪಾರ್ಲಿವೆಂಟು ಸದಸ್ಯರ 3 ಮಂದಿ ನಿಯೋಗವನ್ನು ಕಳಿಸಿದೆ

ಸಾಧ್ಯವಿಲ್ಲ

ನವ ದೆಹಲಿ 19 — ವಿಶ್ವ ಸಂಸ್ಥೆ ಸ್ಥಾಯಿ ಸೇನೆ ಹೊಂದಿರಲಾರದೆಂದು ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಡ್ಯಾಗ್ ಹ್ಯಾಮರ್ಶೀಲ್ಡರು ತಿಳಿಸಿದರು

ನ್ಯೂಸ್ ಪ್ರಿಂಟ್ ಕಾರ್ಖಾನೆ

ಬೆಂಗಳೂರು 19 —ಮೈಸೂರಿನಲ್ಲಿ ನ್ಯೂಸ್‌ಪ್ರಿಂಟು ಕಾರ್ಖಾನೆ ಸ್ಥಾಪಿಸುವ ಸಂಭವವಿದೆ ಎಂದು ಮುಖ್ಯ ಮಂತ್ರಿ ಶ್ರೀ ಬಿ ಡಿ ಜತ್ತಿ ತಿಳಿಸಿದರು

ಜಪಾನಿಗೆ ಕಬ್ಬಿಣದ ಅದಿರು

ನವ ದೆಹಲಿ 19 — ಭಾರತದಿಂದ 4ಮಿಲಿಯ ಟನ್ ಕಬ್ಬಿಣದ ಅದಿರನ್ನು ಜಪಾನ್ ಕೊಳ್ಳಲಿದೆ

ನೀರು ಮಾರಾಟವಾಗಬಹುದು

ಬೆಂಗಳೂರು 19 — ನೀರಿನ ಪರಿಸ್ಥಿತಿ ಈಗಿನಂತೆಯೇ ಇದ್ದರೆ ಅಳತೆಯಲ್ಲಿ ನೀರು ಅರಸನಮೆ ಪೈಸೆಗಳಂತೆ ಮಾರಾಟವಾಗುವದೆಂದು ಶ್ರೀ ವಿ ಎಸ್ ನಾಯ್ಡು ಕಾರ್ಪೊರೇಷನ್ ಸಭೆಯಲ್ಲಿ ತಿಳಿಸಿದರು

ಪ್ರಚಾರ ನಿರ್ಧಾರ

ನವ ದೆಹಲಿ 19 — ನಾಗ್ಪುರ ನಿರ್ಣಯಗಳನ್ನು ಜನರಿಗೆ ತಿಳಿಸುವಂತೆ 1 ತಿಂಗಳು ಒಳಗೆ ತಮ್ಮ ತಮ್ಮ ಕಾಂಗ್ರೆಸು ಸಮಿತಿಗಳಿಗೆ ಸೂಚಿಸುವ ತೀರ್ಮಾನವನ್ನು ಪ್ರಾಂತ ಕಾಂಗ್ರೆಸು ಸಮಿತಿಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳ ಸಮ್ಮೇಳನ ಅಂಗೀಕರಿಸಿದೆ.

ಕಾನೂನು ಮುಖ್ಯವಲ್ಲ

ನವ ದೆಹಲಿ 19 — ಸಹಕಾರ ವ್ಯವಸಾಯ ಪದ್ಧತಿಯಲ್ಲಿ ಕಾನೂನಿಗೆ ಗಮನ ಕೊಡಬೇಕಾದದ್ದು ಅಷ್ಟೇನು ಪ್ರಧಾನವಾದುದಲ್ಲವೆಂದು ಕಾಂಗ್ರೆಸಿನ ಮಾಜಿ ಅಧ್ಯಕ್ಷ ಶ್ರೀ ಯು ಎನ್ ಧೇಬರು ಹೇಳಿದ್ದಾರೆ.

ಅವಿಶ್ವಾಸ ಬಿದ್ದಿತು

ಲಂಡನ್ 18 — ನಿರುದ್ಯೋಗ ಪರಿಹರಿಸುವದರಲ್ಲಿ ಸರ್ಕಾರ ವಿಫಲವಾಗಿದೆ ಎಂಬ ಖಂಡನಾ ನಿರ್ಣಯವನ್ನು ಕಾಮನ್ಸು ಸಭೆಯಲ್ಲಿ ಲೇಬರು ಪಕ್ಷ ಮಂಡಿಸಿದ್ದು 309–247 ಮತಗಳಿಂದ ಬಿದ್ದು ಹೋಯಿತು.

ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ ಸಂಪತ್ಕೃಷ್ಣ ಜೋಯಿಸರಿಂದ

21 ಏಕಾದಶಿ ದ್ವಾದಶಿ ಆಶ್ಲೇಷ

ಅಕ್ರಮ ಪ್ರವೇಶ

ಜಮ್ಮು 19 — ಈ ದಿನ ಇಲ್ಲಿಗೆ ಬಂದ ವಂದಿ ಪ್ರಕಾರ ಸಶಸ್ತ್ರ ಸೇನೆಯು ನೆರವನ್ನು ಪಡೆದ ಪಾಕಿಸ್ತಾನಿಗಳ ತಂಡವೊಂದು ವಿಲ್ಲರ ಜಿಲ್ಲೆಯ ಸೆಂಯಿಂದ ಭಾರತ ಪ್ರವೇಶ ಮಾಡಿತೆಂದು ಕಾವಲಿದ್ದ ಭಾರತ ಪೋಲೀಸರನ್ನು ಕಂಡು ಪರಾರಿ ಆದರೆಂದು ಗೊತ್ತಾಗಿದೆ ಎತ್ತ ಸಂಸ್ಥೆ ವೀಕ್ಷಕರಿಗೆ ಈ ವಿಷಯ ತಿಳಿಸಿದೆ

ವಿವಿಧ ವರ್ತಮಾನ

ಅಮೃತಸರ 19 — ಸರ್ವೋದಯ ನಾಯಕರಾದ ಶ್ರೀ ಜಯ ಪ್ರಕಾಶ ನಾರಾಯಣರು ಹೇಳಿಕೆಯಿತ್ತು, ಭಾರಿ ಕೈಗಾರಿಕೋದ್ಯಮಿಗಳು ತಮ್ಮ ಉದ್ಯಮಗಳನ್ನು ಟ್ರಸ್ಟುಗಳನ್ನಾಗಿ ಪರಿವರ್ತಿಸಿ ಕಾರ್ಮಿಕರನ್ನು ಪಾಲುಗಾರರನ್ನಾಗಿ ಮಾಡಬೇಕೆಂದು ಮನವಿ ಮಾಡಿಕೊಂಡಿರುವರು.

ಮದ್ರಾಸು ಪ್ರಾಂತದ ಶಿಕ್ಷಣ ಸಂಮೇಳನದ 49 ನೆಯ ಅಧಿವೇಶನ ಮೇ 4 ನೇ ತಾ|| ನಿಂದ 6 ರ ವರೆಗೆ ಸೇಲಂನಲ್ಲಿ ಸಮಾವೇಶವಾಗುವದು. ಡಾ|| ಎ. ರಾಮಸ್ವಾಮಿ ಮೊದಲಿಯಾರರು ಅಧ್ಯಕ್ಷತೆ ವಹಿಸುವರು

ಬೆಂಗಳೂರು 19 — ಹಾಸನ ಮಂಗಳೂರು ರೈಲ್ವೆ ಮಾರ್ಗವನ್ನು 3 ನೆಯ ಯೋಜನೆಯಲ್ಲಿ ಸೇರಿಸಿದೆಯೆಂದು ವಿಧಾನ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ಬಿ ಡಿ ಜತ್ತಿ ತಿಳಿಸಿದ್ದಾರೆ.

ಅಹಮದಾಬಾದು 19 — ಇಲ್ಲಿಗೆ ಮೈಲಿಗಳ ದೂರದಲ್ಲಿ ಭೂಮಿ ಜಾರಿ ಒ ವರ್ಷಗಳ ಸತ್ತು ಮುಳುವರು ಗಾಯಗೊಂಡರು.

ಲಂಡನ್ನಿನಲ್ಲಿ 200 ಭಾರತೀಯರು ಉಪಾಹಾರ ಗೃಹಗಳನ್ನೆ

ವಿವಿಧ ವರ್ತಮಾನ

ಅಯೋವಾ 16 — ಅಯೋವಾ ಸ್ಟೇಟ್ ವಿಶ್ವವಿದ್ಯಾನಿಲಯದಲ್ಲಿ ವಿಶ್ವದ ಮೂರು ವಿದ್ಯಾರ್ಥಿಗಳ (ಇಬ್ಬರು ಭಾರತೀಯರು ಮತ್ತು ಒಬ್ಬರು ಚೀನಾದವರು) ಪ್ರಯತ್ನಗಳ ಮೂಲಕ ಹೊಸ ಅಂತರಿಕ್ಷದ ಕೆಲವು ರಹಸ್ಯಗಳನ್ನು ಕಂಡುಹಿಡಿಯಲಾಗುತ್ತಿದೆ.

ಂ ಂ ಂ ಂ

ಮಾರ್ಚ್ 12 ರಂದು ಪ್ರಧಾನಿ ಜವಹರಲಾಲನೆಹ್ರೂರವರು ಲೋಕಸಭೆಯಲ್ಲಿ ಭಾಷಣ ಮಾಡುತ್ತಾ ' ನಮ್ಮ ಗಡಿಗಳ ರಕ್ಷಣೆಗೆ ಕೈಗೊಳ್ಳಬೇಕಾದ ಎಲ್ಲ ಕಾರ್ಯಕ್ರಮಗಳನ್ನು ಕೈಗೊಂಡಿದೆ, ಗಡಿಗಳು ಸುರಕ್ಷಿತವಾಗಿವೆ ' ಎಂದು ಭರವಸೆ ನೀಡಿದರು.

ಂ ಂ ಂ ಂ

ನವದೆಹಲಿ 18— ಮಹಾತ್ಮಾ ಗಾಂಧಿಯವರ ಮನೋಧೈರ್ಯ, ಎಂದು ಡಾ|| ಮಾರ್ಟಿನ್ ಲೂಥರ್ ಕಿಂಗ್‌ರವರ ಭಾಷಣವನ್ನು ದೆಹಲಿಯ ಆಕಾಶವಾಣಿ ಕೇಂದ್ರದವರು ಮಾರ್ಚ್ 19 ರಂದು ಪ್ರಸಾರ ಮಾಡುವರು.

ಂ ಂ ಂ ಂ

ನವದೆಹಲಿ 19— ದಿವಂಗತ ಮೌಲಾನಾ ಅಜಾದರ ಆತ್ಮಚರಿತ್ರೆಯು ಎರಡನೆಯ ಸಂಪುಟದ ಪೂರ್ಣ ಹಸ್ತಪ್ರತಿಯಿದೆಯೆಂದು ಹೇಳಲಾದ, ಸೀಲು ಮಾಡಿದ ಲಕ್ಕೋಟೆಯು ಭಾರತದ ರಾಷ್ಟ್ರೀಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿದೆಯೆಂದೂ, 1988 ರ ಫೆಬ್ರವರಿ 22 ರ ನಂತರ, ಅಂದರೆ, ಅವರ ಮರಣಾನಂತರ ಮೂವತ್ತು ವರ್ಷಗಳಾದಮೇಲೆ ಈ ಲಕ್ಕೋಟೆಯ ಸೀಲನ್ನು ತೆರೆಯಲಾಗುವುದೆಂದೂ, ಅದನ್ನು ಪ್ರಕಟಿಸುವ ಪ್ರಶ್ನೆಯು ಆ ದಿನಾಂಕದ ನಂತರವೇ ಉದ್ಭವಿಸುವುದೆಂದೂ, ಲೋಕಸಭೆಯಲ್ಲಿ ತಿಳಿಸಲಾಯಿತು.

ಂ ಂ ಂ ಂ

ನವದೆಹಲಿ 19— 1958 ರ ಅಕ್ಟೋಬರಿನಿಂದ ಅನಿರ್ದಿಷ್ಟ ಕಾಲದವರೆಗೆ ಮುಚ್ಚಲಾಗಿದ್ದ ವಾರಣಾಸಿ (ಕಾಶಿ) ಹಿಂದೂ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿನ ಎಲ್ಲ ವಿದ್ಯಾಸಂಸ್ಥೆಗಳನ್ನು ಈಗ ಮತ್ತೆ ಪ್ರಾರಂಭಿಸಲಾಗುವುದು ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಂ ಂ ಂ ಂ

ನವದೆಹಲಿ 18— ಐ ಎ ಎಸ್ ಮತ್ತು ಐ ಪಿ ಎಸ್ ಪರೀಕ್ಷೆಗಳಿಗೆ ಕೂಳಿತಿರುವ ಹಿಂದುಳಿದ ವರ್ಗದವರು ಮತ್ತು ಬುಡಕಟ್ಟಿನ ವಿದ್ಯಾರ್ಥಿಗಳಿಗೋಸ್ಕರವಾಗಿ ಪರೀಕ್ಷೆಗೆ ಮುನ್ನ ತಂಬೇತಿ ವರ್ಗಗಳನ್ನು ಪ್ರಾರಂಭಿಸಲಾಗಿದೆ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

Our Bangalore Sales Depot address—
71 / 4 Arcot Sreenivasachar St., Bangalore 2.

ಅಪೆರಾ— 20-3-59 ರಿಂದ
ಅತ್ಯಮೋಘ ಕನ್ನಡ ಚಿತ್ರ ಪ್ರತಿದಿನ 3 ಆಟಗಳು
ಕಪ್ಪು ಗಾರುಡಿ (ಕನ್ನಡ)
ಲಂಡನ್
ಪಾತ್ರ— ರಾಜಕುಮಾರ್, ಶಾಮಜಂದ್ರಶಾಸ್ತ್ರಿ, ನರಸಿಂಹರಾಜು, ಗಣಪತಿಭಟ್ ರಮಾದೇವಿ, ರೇವತಿ, ಸೂರ್ಯಕಲಾ, ಲಲಿತಾರಾವ್ ಬಿ. ಎ.

ವುಡ್‌ಲ್ಯಾಂಡ್ಸ್ ಜನಭರಿತ 2 ನೇ ವಾರ
ಕಾಲಾಪಾನಿ (ಹಿಂದಿ)
ಅತ್ಯುತ್ತಮ ಪತ್ತೇದಾರಿ ಕಥಾವಸ್ತು — [ದಿನ 3 ಪ್ರದರ್ಶನಗಳು
ಬಹಳ ದಿನಗಳಿಂದಲೂ ಎದುರುನೋಡುತ್ತಿದ್ದ ಚಿತ್ರ — ನೋಡಲು ಮರೆಯಬೇಡಿ
ತಾರಾಗಣ— ದೇವ್‌ಆನಂದ್, ಮಧುಬಾಲ, ನಳಿನಿಜಯವಂತ್, ಕಿಶೋರ್‌ಸಾಹು
ದಿಗ್ದರ್ಶನ : ರಾಜ್ ಖೋಸ್ಲ ಸಂಗೀತ : ಎಸ್. ಡಿ. ಬರ್ಮನ್

ಗೋರಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ
ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ
ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರಕ
ಏಕೈಕ ಕನ್ನಡ ಪತ್ರಿಕೆ
Advertise in Goraksana and help the pious cause
ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ಪುರುಷರು ಅದಕ್ಕಾಗಿ ಮೋಹಪಡುತ್ತಾರೆ !
ಸ್ತ್ರೀಯರು ಅದನ್ನು ಮೆಚ್ಚುತ್ತಾರೆ !
ಅದು ಏನು !
ಗುಲಾಬಿ ಎಸಳಿನಂತೆ ಕೋಮಲವಾದ, ಸ್ವಚ್ಛವಾದ ಮತ್ತು ಮೃದುವಾದ ಚರ್ಮ. ಆರೋಗ್ಯದ ಉಜ್ವಲತೆ ಹೊಂದಿರುವ ಚರ್ಮ ಒಲುಮೆ ಕಾಣಿಸುವ ಮತ್ತು ವಿಜಯ ಹೊಂದುವ ಚರ್ಮವೆ ಇದೇ :
ಸೂರೆಮಾಡುವ ಸುಂದರ ಚರ್ಮ.
ಮೈಸೂರು ಗಂಧದ ಸಾಬೂನು
ಇವೆಲ್ಲವನ್ನೂ ನಿಮ್ಮ ನಿಲುಕಿನ ಹತ್ತಿರದಲ್ಲಿಯೇ ಕಾಣುತ್ತದೆ.
ಪ್ರತಿಯೊಬ್ಬರ ಅಚ್ಚುಮೆಚ್ಚಿನ ಈ ಸೌಂದರ್ಯ ಸಾಬೂನನ್ನು ಉದಯೋಗಿಸಿ
ಸರ್ಕಾರಿ ಸಾಬೂನು ಕಾರ್ಖಾನೆ
ಬೆಂಗಳೂರು 3.
— ಇವರಿಂದ ತಯಾರಿಸಲ್ಪಟ್ಟಿದು —

Edited, Printed & Published by Dharma Prachara Nurala M Krishna Rao, at the Satyavadi Press Chamarajapuram, Mysor